ಅನುಬಂಧ–I

698 (1217) **ಶ್ರೀ ಚನ್ನಬಸವರಾಜ್ (ಅಪ್ಪಾಜಿ) ಶಂಕರರಾವ್ ನಾಡಗೌಡ (ಮುದ್ದೇಬಿಹಾಳ)** –ಕೃಷಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

(ಅ) ರಾಜ್ಯದಲ್ಲಿ ಸಣ್ಣ ರೈತರು ಖರೀದಿಸುವ ಟ್ರ್ಯಾಕ್ಟರ್‌ಗಳಿಗೆ ಸರ್ಕಾರ ನೀಡುತ್ತಿರುವ ಸಹಾಯ ಧನವೆಷ್ಟು ,

(ಆ) ಈ ಯೋಜನೆಯು ಅನುಷ್ಠಾನಕ್ಕೆ ಬಂದ ನಂತರ ಒಟ್ಟು ಎಷ್ಟು ಫಲಾನುಭವಿಗಳಿಗೆ ಸಹಾಯ ಧನವನ್ನು ಮಂಜೂರು ಮಾಡಲಾಗಿದೆ , ಅದಕ್ಕಾಗಿ ನೀಡಿದ ಒಟ್ಟು ಹಣದ ಮೊತ್ತ ಎಷ್ಟು, (ಜಿಲ್ಲಾವಾರು ವಿವರ ನೀಡುವುದು) ,

(ಇ) ಟ್ರ್ಯಾಕ್ಟರ್ ಖರೀದಿಗಾಗಿ ಫಲಾನುಭವಿಗಳಿಗೆ ನಿಗದಿಪಡಿಸಲಾದ ಅರ್ಹತೆಗಳೇನು , ಅದನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತಿದೆಯೆ ,

(ಈ) ಸಹಾಯ ಧನ ದುರುಪಯೋಗಪಡಿಸಿಕೊಂಡ ಪ್ರಕರಣಗಳು ಇಲ್ಲಿಯವರೆಗೆ ದಾಖಲಾಗಿರುವುದೆಷ್ಟು , ಈ ಬಗ್ಗೆ ಕೈಗೊಂಡ ಕ್ರಮಗಳೇನು ?

ಶ್ರೀ ಬಂಡೆಪ್ಪ ಕಾಶಂಪೂರ (ಕೃಷಿ ಸಚಿವರು) –

(ಅ) ಶೇ 50% ಅಥವಾ ಗರಿಷ್ಠ 60,000 ರೂ ಗಳು

(ಆ) ಯೋಜನೆಯ ಪ್ರಾರಂಭದಿಂದ 2006–07 ರ ವರೆಗೆ 5653 ಫಲಾನುಭವಿಗಳು ಈ ಯೋಜನೆಯ ಪ್ರಯೋಜನವನ್ನು ಪಡೆದಿದ್ದು, ಇದಕ್ಕಾಗಿ 3345 36 ಲಕ್ಷ ರೂ ಗಳನ್ನು ವೆಚ್ಚ ಮಾಡಲಾಗಿದೆ ಜಿಲ್ಲಾವಾರು ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ

(ಇ) ಟ್ರ್ಯಾಕ್ಟರ್ ಖರೀದಿಗಾಗಿ ನಿಗಧಿಪಡಿಸಲಾದ ಮಾನದಂಡದ ವಿವರಗಳನ್ನು ಅನುಬಂಧ–2 ರಲ್ಲಿ ನೀಡಲಾಗಿದೆ ಇವುಗಳನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತಿದೆ

ಈ) ಯಾವುದು ಇಲ್ಲ

ಅನುಬಂಧ -1

ಚಾಲ್ತಿ ಟ್ರಾಕ್ಟರ್ ವಿತರಣೆ ಕಾರ್ಯಕ್ರಮ ಜಾರಿಗೆ ಬಂದ ನಂತರ 2007 ಮಾರ್ಚ್‌ವರೆಗೆ ಆದ ಪ್ರಗತಿಯ ಜಿಲ್ಲಾವಾರು ವಿವರ

ಕ್ರ ಸಂ	ಜಿಲ್ಲೆಗಳು	ವಿತರಿಸಲಾದ ಟ್ರ್ಯಾಕ್ಟರ್‌ಗಳ ಸಂ		ನೀಡಿದ ಒಟ್ಟು ರಿಯಾಯಿತಿ ಮೊತ್ತ	
		ಗುರಿ	ಸಾಧನೆ	ಗುರಿ	ಸಾಧನೆ
1	ಬೆಂಗಳೂರು (ನ)	111	131	72 00	77 40
2	ಬೆಂಗಳೂರು (ಗ್ರಾ)	153	158	92 80	94 80
3	ಕೋಲಾರ	303	327	181 80	196 54
4	ತುಮಕೂರು	273	323	164 20	186 30
5	ಶಿವಮೊಗ್ಗ	165	152	99 00	91 10
6	ಚಿತ್ರದುರ್ಗ	211	329	126 60	197 40
7	ದಾವಣಗೆರೆ	215	218	142 80	150 71
8	ಮೈಸೂರು	223	243	133 50	148 12
9	ಚಾಮರಾಜನಗರ	141	166	84 60	99 60
10	ಮಂಡ್ಯ	125	118	75 00	70 80
11	ಕೊಡಗು	93	88	55 80	52 80
12	ಹಾಸನ	257	303	158 20	181 42
13	ಚಿಕ್ಕಮಗಳೂರು	212	230	127 20	138 30
14	ದ ಕನ್ನಡ	135	26	81 00	15 60
15	ಉಡುಪಿ	34	11	20 40	6 60
16	ಧಾರವಾಡ	159	174	95 40	102 60
17	ಗದಗ	169	303	101 40	180 90
18	ಹಾವೇರಿ	285	328	171 00	187 50
19	ಉ ಕನ್ನಡ	279	103	167 40	61 80
20	ಬೆಳಗಾಂ	288	236	165 30	143 40
21	ಬಿಜಾಪುರ	165	134	96 30	81 60
22	ಬಾಗಲಕೋಟೆ	199	161	118 50	95 70
23	ರಾಯಚೂರು	217	291	137 00	173 70
24	ಕೊಪ್ಪಳ	154	265	91 80	143 70
25	ಬಳ್ಳಾರಿ	203	323	126 60	199 01
26	ಗುಲ್ಬರ್ಗಾ	273	307	155 70	180 56
27	ಬೀದರ್	171	205	97 20	107 40
	ಒಟ್ಟು	**5213**	**5653**	**3138.50**	**3345.36**

ಅನುಬಂಧ–2

ಟ್ರ್ಯಾಕ್ಟರ್ ಫಲಾನುಭವಿಗಳನ್ನು ಆಯ್ಕೆ ಮಾಡಲು ಅಳವಡಿಸಿದ ಮಾನದಂಡಗಳು

1 ಟ್ರ್ಯಾಕ್ಟರ್‌ಗಳಿಗೆ ಸಹಾಯಧನವನ್ನು ಎಲ್ಲಾ ವರ್ಗದ ರೈತರಿಗೆ ನೀಡುವುದು

2 ಈ ಸೌಲಭ್ಯವನ್ನು ಹಿಂದೆ ಪಡೆದಿರಬಾರದು

3 ಈ ಯೋಜನೆಯಡಿಯಲ್ಲಿ ನೀಡಿರುವ ಅನುದಾನದಲ್ಲಿ ಶೇಕಡ 23 ರಷ್ಟು ಅನುದಾನವನ್ನು ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳ ರೈತರಿಗೆ ಮತ್ತು ಸರ್ಕಾರದ ನಿಯಮಾನುಸಾರ ಇತರೆ ಹಿಂದುಳಿದ ವರ್ಗಗಳ ರೈತರಿಗೆ ಮತ್ತು ಅಲ್ಪ ಸಂಖ್ಯಾತರಿಗೆ ವಿತರಿಸತಕ್ಕದ್ದು

4 ಸರ್ಕಾರದ ಆದೇಶ ಸಂ ಹೆಚ್‌ಡಿಪಿ 82 ಎಎನ್‌ಸಿ 2004 ಬೆಂಗಳೂರು ದಿನಾಂಕ 7 03 2005 ಅನ್ವಯ ಕೃಷಿ ಯಾಂತ್ರೀಕರಣ ಯೋಜನೆಯಡಿ ಸೌಲಭ್ಯಗಳನ್ನು ಅಂಗೀಕೃತ ಸ್ವಸಹಾಯ ಗುಂಪು, ಗ್ರಾಮ ಪಂಚಾಯತಿ ಮತ್ತು ಇತರೆ ಸಂಘ ಸಂಸ್ಥೆಗಳಿಗೆ ನೀಡುವುದು

5 ಸದರಿ ಯೋಜನೆಯಡಿಯಲ್ಲಿ ಶೇಕಡ 33 ಪಾಲನ್ನು ಒಟ್ಟಾರೆಯಾಗಿ ರೈತ ಮಹಿಳೆಯರಿಗೆ ಮೀಸಲಿಡತಕ್ಕದ್ದು

6 ಹೆಚ್ಚಿನ ಆದ್ಯತೆಯನ್ನು ಸಣ್ಣ ಅತಿ ಸಣ್ಣ ಮತ್ತು ಮಧ್ಯಮ ವರ್ಗದ ರೈತರಿಗೆ ನೀಡುವುದು

7 ಸಹಾಯವನ್ನು ಬಯಸುವ ರೈತರಿಂದ ಈ ಕೆಳಕಂಡ ದಾಖಲಾತಿಗಳನ್ನು ಪಡೆದುಕೊಳ್ಳತಕ್ಕದ್ದು (ಅ) ರೈತರ ಅರ್ಜಿ (ಆ) ಪಹಣಿ ಪತ್ರ (ಇ) ಕೃಷಿ ಯಂತ್ರೋಪಕರಣವನ್ನು ಕೃಷಿ ಕಾರ್ಯಕ್ರಮಕ್ಕಾಗಿ ಮಾತ್ರ ಉಪಯೋಗಿಸುವ ಬಗ್ಗೆ ರೈತರಿಂದ ಘೋಷಣಾ ಪತ್ರ (ಈ) ಬ್ಯಾಂಕಿನಿಂದ ಸಾಲ ಮಂಜೂರಾತಿ ಪತ್ರದೊಂದಿಗೆ ರಿಯಾಯಿತಿ ದರ ಸಂದಾಯಕ್ಕಾಗಿ ಬೇಡಿಕೆ ಪತ್ರ (ಉ) ಜಾತಿ ಪ್ರಮಾಣ ಪತ್ರ.

8 ಶೇ 50 ಮಿತಿಗೆ ಒಳಪಟ್ಟು ರೂ 60,000 ರಿಯಾಯಿತಿ ಸೌಲಭ್ಯವನ್ನು ಪ್ರತಿ ಟ್ರ್ಯಾಕ್ಟರ್‌ಗೆ ನೀಡುವುದು

9 ಸ್ಥಳೀಯ ಜನ ಪ್ರತಿನಿಧಿಗಳಿಂದ ಬಂದ ಶಿಫಾರಸ್ಸುಗಳನ್ನು ಗಮನದಲ್ಲಿಟ್ಟುಕೊಂಡು ಫಲಾನುಭವಿಗಳನ್ನು ಆಯ್ಕೆ ಮಾಡುವುದು